**ಇಂದು ದಿನಾಂಕಃ 27-01-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ ವಕೀಲರಿಂದಃ-**

ಈ ಪ್ರಕರಣವನ್ನು ಹೊರತು ಪಡಿಸಿ ಬೇರೆ ಯಾವುದೇ ಪ್ರಕರಣವನ್ನು ಹುಡಿಲ್ಲ. ಆಸ್ತಿಗಾಗಿ ಆರೋಪಿತರ ವಿರುದ್ದ ದಾವೆ ಹುಡಿದ್ದೇನೆ. ಸ.ನಂ. 21 ರಲ್ಲಿ ಗಿಡಗಳು ಇದ್ದವು. ನನ್ನ ದೂರಿನಲ್ಲಿ ಸರ್ವೇ ಸಂಖ್ಯೆ ಉಲ್ಲೇಖವಿರುವ ಬಗ್ಗೆ ನನಗೆ ನೆನಪಿಲ್ಲ. ಸ.ನಂ. 21 ರಲ್ಲಿರುವ ಜಮೀನು 1, 5 ನೇ ಆರೋಪಿ, ನನ್ನ ಹೆಸರು ಮತ್ತು ನನ್ನ ತಾಯಿಯ ಹೆಸರಿನಲ್ಲಿದೆ. ಸ.ನಂ. 21 ರಲ್ಲಿರುವ ಜಮೀನಿನ ವಿಸ್ತೀರ್ಣ 11 ಎಕರೆ ಚಿಲ್ಲರೆ ಗುಂಟೆ ಇದೆ. ಸಾಮಾನ್ಯವಾಗಿ ಜಮೀನಿನಲ್ಲಿ ಎಷ್ಟು ಗಿಡಗಳು ಇವೆ ಎಂದು ಪಹಣಿಯಲ್ಲಿ ಉಲ್ಲೇಖವಿರುತ್ತದೆ ಎಂದರೆ ಸರಿ. ಪಹಣಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ಗಿಡ ಯಾರಿಗೆ ಮತ್ತು ಎಷ್ಟು ಹಣಕ್ಕೆ ಮಾರಾಟ ಮಾಡಿರುವ ಬಗ್ಗೆ ನನ್ನ ದೂರಿನಲ್ಲಿ ಉಲ್ಲೇಖವಿದೆ. ಗಿಡಗಳನ್ನು ಸಿದ್ದು ಪಾಟೀಲರವರಿಗೆ ಮಾರಾಟ ಮಾಡಿದ್ದಾರೆ. ರೂ. 60,000/- ಹಣಕ್ಕೆ ಮಾರಾಟ ಮಾಡಿದ್ದಾರೆ.

ಹೊಲದಲ್ಲಿ ಗಿಡ ಇರುವುದಿಲ್ಲ ಹಾಗೂ ಜಗಳ ಆಗಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರಣ್ಯ ಅಧಿಕಾರಿಗಳಿಗೆ ನಾನು ಯಾವುದೇ ದೂರು ಸಲ್ಲಿಸಿಲ್ಲ.

ಘಟನೆಯಾದಾಗ ನನಗೆ ರಕ್ತ ಬಂದಿರುತ್ತದೆ. ರಕ್ತ ನನ್ನ ಬಟ್ಟೆಗೆ ಹತ್ತಿರುವುದಿಲ್ಲ. ನಾನು ಮೊದಲು ಸುಲೇಪೇಟ ಪೋಲಿಸ ಠಾಣೆಗೆ ಹೋಗಿ ಅಲ್ಲಿಂದ ಪೋಲಿಸರು ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸ ಠಾಣೆಗೆ ಹೋದಾಗ ಮಧ್ಯಾಹ್ನ 12.30 ಗಂಟೆಯಾಗಿತ್ತು. ಆಸ್ಪತ್ರೆಗೆ ಹೋದಾಗ ಮಧ್ಯಾಹ್ನ 3 ಗಂಟೆಯಾಗಿತ್ತು. ಮಧ್ಯಾಹ್ನ 12.30 ರಿಂದ 3 ರವರೆಗೆ ನಾನು ಪೋಲಿಸ ಠಾಣೆಯಲ್ಲಿ ಇದ್ದೆ. ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ಪೋಲಿಸ ಹೆಸರು ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ನಾನು 20 ನಿಮಿಷ ಇದ್ದೆ. ಆಸ್ಪತ್ರೆಯಲ್ಲಿ ನಾನು ಮಧ್ಯಾಹ್ನ 3.35 ರವರೆಗೆ ಉಳಿದುಕೊಂಡಿದ್ದೇನೆ. ನಾನು ಚಿಕಿತ್ಸೆ ಪಡೆದುಕೊಂಡು ವರದಿಯನ್ನು ಪೋಲಿಸರಿಗೆ ನೀಡಿದ್ದೇನೆ. ಪೋಲಿಸ ಠಾಣೆಗೆ ನಾನು ಒಬ್ಬನೇ ಆ ದಿನ ಹೋಗಿರುತ್ತೇನೆ.

**ಮುಂದುವರೆದ ಪಾಟೀ ಸವಾಲುಃ ನ್ಯಾಯಾಲಯದ ಸಮಯ ಮುಗಿದ ಕಾರಣ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**